I/362483/2022

**ಕರ್ನಾಟಕ ಸರ್ಕಾರ**
**GOVERNMENT OF KARNATAKA**


ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru-03
Telephone: 080 23367123
Email:apccfpr@gmail.com


E-Office No. KFD/HOFF/B3(EST)/138/2019-PnR-KFD **E - 99380**
ದಿನಾಂಕ:29-12-2022.

## ಅಧಿಕೃತ ಜ್ಞಾಪನಾ

**ವಿಷಯ :** ದಿನಾಂಕ:01-01-2020ರಿಂದ 09-12-2021ರವರೆಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) -HK– ಹಿರಿಯ ವಾಹನ ಚಾಲಕ (Senior Driver) ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ(Draft Seniority List)ಯನ್ನು ಪ್ರಕಟಿಸುವ ಬಗ್ಗೆ.

**ಉಲ್ಲೇಖ :**
1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957 ರ ನಿಯಮ-10.
2. ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ.ಸಿಆಸುಇ 106 ಸೆನೆನಿ 2021, ದಿನಾಂಕ:10-12-2021.

**ಪ್ರಸ್ತಾವನೆ:-**

1. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ಪ್ರತಿಯೊಂದು ಸಾಲಿನಲ್ಲಿ ಪ್ರತಿಯೊಂದು ವೃಂದದಲ್ಲಿನ ಅಧಿಕಾರಿ/ಸಿಬ್ಬಂದಿಗಳ ಜ್ಯೇಷ್ಠತ ಪಟ್ಟಿ (Seniority List)ಯನ್ನು ತಯಾರಿಸುವುದು ಕಡ್ಡಾಯವಾಗಿರುತ್ತದೆ.

2. ಈ ಮಧ್ಯೆ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 106 ಸೆನೆನಿ 2021 ದಿನಾಂಕ:10.12.2021ರಲ್ಲಿ *"ರಾಜ್ಯ ಸಿವಿಲ್ ಸೇವೆಗಳಲ್ಲಿನ ಯಾವುದೇ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಅನುಪಾತ/ಪ್ರತಿ ಶತಪ್ರಮಾಣವನ್ನು ನಿಗದಿಪಡಿಸಿದ್ದಲ್ಲಿ, ನಿಗದಿಪಡಿಸಿದ ಅನುಪಾತ/ಪ್ರತಿಶತದನ್ವಯ ಹುದ್ದೆ ಆದಾರಿತವಾಗಿ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗಳಿಗೆ ಒಟ್ಟು ಹುದ್ದೆಗಳನ್ನು ವರ್ಗೀಕರಣ ಮಾಡತಕ್ಕದ್ದು. ಈ ಉದ್ದೇಶಕ್ಕಾಗಿ ಆ ವೃಂದದಲ್ಲಿನ ಶಾಶ್ವತ ಹುದ್ದೆಗಳ ಜೊತೆಗೆ ತಾತ್ಕಾಲಿಕ ಹುದ್ದೆಗಳು ಸಹ ಒಳಗೊಂಡಿರುತ್ತವೆ. ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ಹುದ್ದೆಗಳನ್ನು ಮೇಲ್ಕಂಡಂತೆ ವರ್ಗೀಕರಿಸಿದ ನಂತರ ನೇರ ನೇಮಕಾತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ನೇರ ನೇಮಕಾತಿಯಿಂದಲೇ ಮತ್ತು ಮುಂಬಡ್ತಿಗಾಗಿ ವರ್ಗೀಕರಿಸಿದ ಹುದ್ದೆಗಳನ್ನು ಮುಂಬಡ್ತಿಯಿಂದಲೇ ಭರ್ತಿಮಾಡತಕ್ಕದ್ದು "*ಎಂದು ತಿಳಿಸಲಾಗಿದೆ. ಮುಂದುವರೆದು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:DPAR 48 SSR 75 ದಿನಾಂಕ:05.07.1976ರಲ್ಲಿ ಬ್ಲಾಕ್ ಅವಧಿಯನ್ನು ವಿಂಗಡಿಸುವ ಕುರಿತು ಮಾರ್ಗ ಸೂಚಿಗಳನ್ನು ನಿಗದಿಪಡಿಸಿದ್ದು, ಈ ಅಧಿಕೃತ ಜ್ಞಾಪನದ ಕಂಡಿಕೆ3 (c)ರಂತೆ ನೇರ ನೇಮಕಾತಿ ಮತ್ತು ಬಡ್ತಿಯ ನಡುವೆ ಅನುಪಾತವು ದಿನಾಂಕ:10.12.2021ರ ಆದೇಶದಂತೆ ಬದಲಾವಣೆಗೊಂಡಿದ್ದರಿಂದ ದಿನಾಂಕ:01.01.2020ರಿಂದ ಆರಂಭವಾಗುವ ಬ್ಲಾಕ್ ಅವಧಿಯನ್ನು ದಿನಾಂಕ:09.12.2021ಕ್ಕೆ ಮುಕ್ತಾಯಗೊಳಿಸಬೇಕಾಗಿರುತ್ತದೆ.

3. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ಹಾಗೂ ಸರ್ಕಾರಿ ಆದೇಶಗಳು/ಸುತ್ತೋಲೆಗಳನ್ನು ಅನುಸರಿಸಿ ದಿನಾಂಕ:01-01-2020 ರಿಂದ

09-12-2021ರವರೆಗಿನ ಅವಧಿಯಲ್ಲಿ 'ಹಿರಿಯ ವಾಹನ ಚಾಲಕ (Senior Driver)' ವೃಂದದಲ್ಲಿ ಇಲಾಖೆಯಲ್ಲಿ ಯಾವುದೇ ನೇಮಕಾತಿಗಳು ಆಗಿರುವುದಿಲ್ಲ. ಆದಾಗ್ಯೂ ದಿನಾಂಕ:01-01-2020 ರಿಂದ 09-12-2021ರವರೆಗಿನ ಅವಧಿಗೆ ಸದರಿ ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ (Draft Seniority List)ಯನ್ನು ಅನುಬಂಧದಲ್ಲಿ ಶೂನ್ಯ ಮಾಹಿತಿಯೊಂದಿಗೆ ಪ್ರಕಟಿಸಲು ತೀರ್ಮಾನಿಸಿ ಈ ಕೆಳಕಂಡ ಆದೇಶ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಾವಳಿ 1957ರ ನಿಯಮ 10ರನ್ವಯ ದಿನಾಂಕ:01-01-2020ರಿಂದ 09-12-2021ರವರೆಗಿನ ಅವಧಿಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) - 'ಹಿರಿಯ ವಾಹನ ಚಾಲಕ (Senior Driver)' ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತ ಪಟ್ಟಿ(Draft Seniority List)ಯನ್ನು ಅನುಬಂಧದಲ್ಲಿ ಪ್ರಕಟಿಸಿ ಆದೇಶಿಸಿದೆ.

ಈ ಕರಡು ಜ್ಯೇಷ್ಠತ ಪಟ್ಟಿಯ ಕುರಿತು ಬಾದಿತರಾದವರು ಆಕ್ಷೇಪಣೆಗಳನ್ನು **ಸ್ಪಷ್ಟ ರೀತಿಯಲ್ಲಿ ಪೂರಕ ಸಮರ್ಥನೀಯ ದಾಖಲಾತಿಗಳೊಂದಿಗೆ** ಇಲಾಖೆಯ ವೆಬ್‌ಸೈಟ್ www.aranya.gov.inರಲ್ಲಿ ಈ ಆದೇಶವನ್ನು ಪ್ರಕಟಿಸಿದ 21 ದಿನಗಳೊಳಗಾಗಿ ಈ ಕಚೇರಿಯ ಸಂಬಂಧಿಸಿದ ಶಾಖೆಯ ಇ-ಮೇಲ್ ವಿಳಾಸ "b3section2016@gmail.com"ರ ಮೂಲಕ ಸಲ್ಲಿಸಬಹುದಾಗಿದೆ.

ಇತರೆ ಮಾದ್ಯಮದ *[ಭೌತಿಕವಾಗಿ/ ಬೇರೆ ಇ-ಮೇಲ್ ಗಳಿಗೆ/ ದೂರವಾಣಿ/ ಸಾಮಾಜಿಕ ಮಾದ್ಯಮ (Social media) ಮುಂತಾದ ಇತರೆ ಮಾದ್ಯಮಗಳ]* ಮೂಲಕ ಕಳುಹಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಅಲ್ಲದೇ, ಅಸ್ಪಷ್ಟ ಆಕ್ಷೇಪಣೆಗಳನ್ನು ಹಾಗೂ ನಿಗದಿತ ದಿನಾಂಕ ಮೀರಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**Signed by Raj Kishore Singh, Ifs**
**Date: 31-12-2022 18:39:44**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ, ಮುಖ್ಯಸ್ಥರು)

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ:**

1. ಎಲ್ಲಾ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
2. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಬೆಂಗಳೂರು- ಈ ಆದೇಶವನ್ನು ಇಲಾಖೆಯ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
6. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
7. ಎಲ್ಲಾ ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ.
8. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.

I/362483/2022

9. ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಗೆ – *ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ.*
10. ಎಲ್ಲಾ ಹಿರಿಯ ವಾಹನ ಚಾಲಕ (Senior Driver)ವೃಂದದ ಸಿಬ್ಬಂದಿಗಳಿಗೆ – ಇಲಾಖಾ ವೆಬ್‌ಸೈಟ್ ನಲ್ಲಿ ಈ ಪ್ರಕಟಣೆ ಮೂಲಕ.

I/362484/2022

# ಅನುಬಂಧ -1
# ಭಾಗ-1

## ಹುದ್ದೆಗಳ ವಾಸ್ತವಿಕ ಮಾಹಿತಿ

**ದಿನಾಂಕ: 01.01.2020 ರಿಂದ09.12.2021 ರವರೆಗಿನ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) - 'ಹಿರಿಯ ವಾಹನ ಚಾಲಕ (Senior Driver)' ರಾಜ್ಯ ಮಟ್ಟ ವೃಂದದ ಕರಡು ಜ್ಯೇಷ್ಠತ ಪಟ್ಟಿ (Draft Seniority List)**

| ಕ್ರ. ಸಂ | ವೃಂದದ ಹೆಸರು | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|
| | | | | | | ಹೆಚ್ಚುವರಿ | | ಕೊರತೆ | | | | |
| | | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | ನೇರ | ಮುಂಬಡ್ತಿ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| | ಹಿರಿಯ ವಾಹನ ಚಾಲಕ (Senior Driver) | 0 | 1 | 0 | 0 | 0 | 0 | 0 | 1 | 0 | 1 | - |

ದಿನಾಂಕ:29-12-2022

Signed by Raj Kishore Singh, Ifs
Date: 31-12-2022 18:40:05
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)

I/362485/2022

# ಅನುಬಂಧ-2

**ನೇರ ನೇಮಕಾತಿ ಅಥವಾ ಮುಂಬಡ್ತಿ ಮುಖಾಂತರ ಒಂದೇ ವಿಧಾನದಿಂದ ನೇಮಕಾತಿ ಮಾಡುವ ವೃಂದಗಳಿಗೆ ದಿನಾಂಕ:01-01-2020 ರಿಂದ 09-12-2021 ರವರೆಗೆ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ (Kalyan-Karnataka Cadre) - ಹಿರಿಯ ವಾಹನ ಚಾಲಕ (Senior Driver) ವೃಂದದ ರಾಜ್ಯ ಮಟ್ಟದ ಕರಡು ಜ್ಯೇಷ್ಠತಾ ಪಟ್ಟಿ (Draft Seniority List).**

1. **ಇಲಾಖೆ:** ಕರ್ನಾಟಕ ಅರಣ್ಯ ಇಲಾಖೆ
2. **ವೃಂದದ ಹೆಸರು:** ಹಿರಿಯ ವಾಹನ ಚಾಲಕ (Senior Driver)
3. **ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ (ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳೆರಡೂ ಒಳಗೊಂಡಂತೆ):** 01
4. **ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ:** ಮುಂಬಡ್ತಿ

**ದಿನಾಂಕ: 01.01.2020 ರಿಂದ09.12.2021 ರವರೆಗಿನ** ಹಿರಿಯ ವಾಹನ ಚಾಲಕ (Senior Driver) **ರಾಜ್ಯ ಮಟ್ಟ ವೃಂದದ ಕರಡು ಜ್ಯೇಷ್ಠತ ಪಟ್ಟಿ**

| ಕ್ರ. ಸಂ. | ಹೆಸರು | ಮೀಸಲಾತಿ ವರ್ಗ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|
| 01-01-2020ರಿಂದ 09-12-2021ರ ವರೆಗೆ ಕಲ್ಯಾಣ ಕರ್ನಾಟಕ ವೃಂದದ ಹುದ್ದೆ ಇರುವುದಿಲ್ಲ. ಆದುದರಿಂದ ಮಾಹಿತಿಯು ಶೂನ್ಯವಾಗಿರುತ್ತದೆ. | | | | | | |

ದಿನಾಂಕ:29-12-2022

**Signed by Raj Kishore Singh, Ifs**
**Date: 31-12-2022 18:40:29**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅರಣ್ಯ ಪಡೆ ಮುಖ್ಯಸ್ಥರು)